For more job news visit: www.kpscvaani.com

ಕರ್ನಾಟಕ ಲೋಕಸೇವಾ ಆಯೋಗ, 'ಉದ್ಯೋಗ ಸೌಧ ', ಬೆಂಗಳೂರು-560001.

ಸಂಖ್ಯೆ: ಎಸ್ ಇಸಿ ಎಸ್/ಟಿಪ್ಪಣಿ/62/2026-27/ಪಿಎಸ್‌ಸಿ ದಿನಾಂಕ: 17-10-2026

ಅಭ್ಯರ್ಥಿಗಳ ಗಮನಕ್ಕೆ

ರಾಜ್ಯ ನಾಗರಿಕ ಸೇವೆಯಲ್ಲಿನ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರನ್ವಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ನೇರ ನೇಮಕಾತಿಯಲ್ಲಿ ಮೀಸಲಾತಿಯನ್ನು ಅನುಕ್ರಮವಾಗಿ ಶೇ.15ರಿಂದ ಶೇ.17ಕ್ಕೆ ಹಾಗೂ ಶೇ.3 ರಿಂದ ಶೇ.7ಕ್ಕೆ ಹೆಚ್ಚಳ ಮಾಡಲಾಗಿರುತ್ತದೆ. ತದನಂತರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 01 ಸೆಹಿಮ 2022, ದಿನಾಂಕ:28-12-2022ರಲ್ಲಿ ಹೆಚ್ಚಿಸಿದ ಮೀಸಲಾತಿಯನ್ವಯ ರೋಸ್ಟರ್ ಬಿಂದುಗಳನ್ನು ಗುರುತಿಸಿ ಆದೇಶ ಜಾರಿ ಮಾಡಲಾಗಿರುತ್ತದೆ. ಸದರಿ ಆದೇಶದನ್ವಯ 2610 ಹುದ್ದೆಗಳ ನೇಮಕಾತಿಗಾಗಿ ಆಯೋಗದಲ್ಲಿ ಒಟ್ಟು 18 ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಆದರೆ ಸರ್ಕಾರದ ದಿನಾಂಕ:28-12-2022ರಲ್ಲಿ 56% ಕ್ಕೆ ಹೆಚ್ಚಿಸಿದ ಮೀಸಲಾತಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ WP ಸಂಖ್ಯೆ:200448 OF 2025 (SC-ST-PIL) C/W WP ಸಂಖ್ಯೆ:25515 OF 2025(S-RES) ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ್ದ ಮಧ್ಯಂತರ ಆದೇಶದನ್ವಯ ಅಂತಿಮ ಆದೇಶಕ್ಕೆ ಒಳಪಟ್ಟಂತೆ ಉಲ್ಲೇಖಿತ 18 ಅಧಿಸೂಚನೆಗಳ ನೇಮಕಾತಿ ಪ್ರಕ್ರಿಯೆಗಳನ್ನು ಮುಂದುವರೆಸಲಾಗಿರುತ್ತದೆ.

ಹೀಗೆ ಮುಂದುವರೆಸಲಾದ ನೇಮಕಾತಿಗಳಿಗೆ ಸಂಬಂಧಪಟ್ಟಂತೆ 2610 ಹುದ್ದೆಗಳಲ್ಲಿ ಒಟ್ಟು 1349 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಗೆ ಅಂತಿಮ ಆಯ್ಕೆ ಪಟ್ಟಿ ಮತ್ತು ಆಯ್ಕೆಯಾದ ಅಭ್ಯರ್ಥಿಗಳ ದಾಖಲೆಗಳನ್ನು ರವಾನಿಸಲಾಗಿರುತ್ತದೆ. ಉಳಿದ 1261 ಹುದ್ದೆಗಳಿಗೆ ಸಂಬಂಧಪಟ್ಟಂತೆ ನೇಮಕಾತಿಗಳು ನೇಮಕಾತಿ ಪ್ರಕ್ರಿಯೆಗಳ ವಿವಿಧ ಹಂತಗಳಲ್ಲಿ ಬಾಕಿ ಇರುತ್ತವೆ.

ಪ್ರಸ್ತುತ ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯವು WP ಸಂಖ್ಯೆ:200448 OF 2025 (SC-ST-PIL) C/W WP ಸಂಖ್ಯೆ:25515 OF 2025(S-RES) ರಲ್ಲಿ ದಿನಾಂಕ:12-10-2026ರಂದು ಹೊರಡಿಸಿರುವ ಅಂತಿಮ ಆದೇಶದಲ್ಲಿ The Karnataka Scheduled Castes and Scheduled Tribes (Reservation of Seats in Educational Institutions and of Appointments or Posts in the Services under the State) Act, 2022 ರ Section-3 ಮತ್ತು Section-4 ಅನ್ನು ರದ್ದುಗೊಳಿಸಿರುತ್ತದೆ.

ಆಯೋಗದಲ್ಲಿ ವಿವಿಧ ಹಂತದ ನೇಮಕಾತಿ ಪ್ರಕ್ರಿಯೆಗಳು ಬಾಕಿಯಿರುವ ಈ ಕೆಳಕಂಡ 1261 ಹುದ್ದೆಗಳ ಮುಂದಿನ ನೇಮಕಾತಿ ಪ್ರಕ್ರಿಯೆಗಳನ್ನು ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಬಗ್ಗೆ ಸರ್ಕಾರದ ನಿರ್ದೇಶನ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು.

ಕ್ರ. ಸಂ.	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ಇಲಾಖೆಯ ಹೆಸರು	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ
1	PSC 509 E(1)/2023-24, dated 26-02-2024	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	Gazetted Probationers Group A & B	384
2	PSC 516 E(1) (HK)/2023-24, dated 01-03-2024	ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ	Assistant Controller Group A (HK)	15
3	PSC 517E(1) (RPC)/2023-24, dated 01-03-2024	ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ	Assistant Controller Group A (RPC)	43
			Audit Officer Group B (RPC)	54
4	ಪಿಎಸ್ ಸಿ 1 ಆರ್‌ಟಿಬಿ-1/2023, ದಿನಾಂಕ:13-03-2024ಗ್ರೂಪ್ –'ಬಿ' ಹುದ್ದೆಗಳು (ಉಳಿಕೆ ಮೂಲ ವೃಂದ)	ಭೂಮಾಪನ, ಕಂದಾಯ ವ್ಯವಸ್ಥೆ, ಮತ್ತು ಭೂ ದಾಖಲೆಗಳ ಇಲಾಖೆ	ಭೂ ದಾಖಲೆಗಳ ಸಹಾಯಕ ನಿರ್ದೇಶಕರು	24
		ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	ಪತ್ರಾಂಕಿತ ವ್ಯವಸ್ಥಾಪಕರು/ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು	21

For more job news visit : www.kpscvaani.com

ಕ್ರ. ಸಂ.	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ಇಲಾಖೆಯ ಹೆಸರು	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ
		ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	ಸಹಾಯಕ ನಿರ್ದೇಶಕರು	20
		ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	ಸಹಾಯಕ ಇಂಜಿನಿಯರ್ (ಸಿವಿಲ್)(ವಿಭಾಗ-1)	92
		ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ	ಕಾರ್ಖಾನೆಗಳ ಸಹಾಯಕ ನಿರ್ದೇಶಕರು	7
	ಪಿಎಸ್ ಸಿ 1 ಆರ್‌ಟಿಬಿ-1/2023, ದಿನಾಂಕ:13-03-2024ಗ್ರೂಪ್ –'ಬಿ' ಹುದ್ದೆಗಳು (ಉಳಿಕೆ ಮೂಲ ವೃಂದ)	ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ	ಬಾಯ್ಲರುಗಳ ಸಹಾಯಕ ನಿರ್ದೇಶಕರು	3
		ಅಂತರ್ಜಲ ನಿರ್ದೇಶನಾಲಯ	ಭೂ ವಿಜ್ಞಾನಿ	10
		ಜಲ ಸಂಪನ್ಮೂಲ ಇಲಾಖೆ	ಸಹಾಯಕ ಇಂಜಿನಿಯರ್ (ಸಿವಿಲ್)(ವಿಭಾಗ-1)	90
		ಜಲ ಸಂಪನ್ಮೂಲ ಇಲಾಖೆ	ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) (ವಿಭಾಗ-1)	10
5	ಪಿಎಸ್‌ಸಿ 503 ಆರ್.ಟಿ.ಬಿ-2/2023-24/3494, ದಿ:15-03-2024(RPC)	ಸಾರ್ವಜನಿಕ ಗ್ರಂಥಾಲಯ	ಸಹಾಯಕ ಗ್ರಂಥಪಾಲಕ	13
6	ಪಿ.ಎಸ್.ಸಿ. 506 ಆರ್.ಟಿ.ಬಿ-2/2023-24/3497,ದಿ:15-03-2024(RPC)	ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ	ಕೈಗಾರಿಕಾ ವಿಸ್ತರಣಾ ಅಧಿಕಾರಿ	50
7	ಪಿ.ಎಸ್.ಸಿ. 505 ಆರ್.ಟಿ.ಬಿ-2/ 2023-24/3496, ದಿನಾಂಕ:15-03-2024 (HK)	ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ	ಕೈಗಾರಿಕಾ ವಿಸ್ತರಣಾ ಅಧಿಕಾರಿ	13
8	ಪಿ.ಎಸ್.ಸಿ. 504 ಆರ್.ಟಿ.ಬಿ-2/ 2023-24/3495, ದಿ:15-03-2024	ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ ಸಭೆ/ಪುರ ಸಭೆ/ ಪಟ್ಟಣ ಪಂಚಾಯಿತಿ)	ನೀರು ಸರಬರಾಜು ಆಪರೇಟರ್	4
		ಸಾರ್ವಜನಿಕ ಗ್ರಂಥಾಲಯ ಇಲಾಖೆ	ಸಹಾಯಕ ಗ್ರಂಥಪಾಲಕ	8
9	ಪಿಎಸ್‌ಸಿ 1 ಆರ್‌ಟಿಬಿ-1/2024 ದಿನಾಂಕ:29/07/2024	ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	ಪಶು ವೈದ್ಯಾಧಿಕಾರಿಗಳು	342+58 (ಬ್ಯಾ.ಲಾ)
			ಒಟ್ಟು ಹುದ್ದೆಗಳ ಸಂಖ್ಯೆ	1261

ಮುಂದುವರೆದು, ಈಗಾಗಲೇ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ನೇಮಕಾತಿ ಪ್ರಾಧಿಕಾರಗಳಿಗೆ ರವಾನಿಸಲಾಗಿರುವ 1349 ಹುದ್ದೆಗಳಿಗೂ ಸಹ ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದ ಆದೇಶವು ಅನ್ವಯವಾಗುವುದರಿಂದ, ಅವುಗಳ ಬಗ್ಗೆ ಮಾನ್ಯ ನ್ಯಾಯಾಲಯದ ಆದೇಶದ ಅನುಪಾಲನೆಯ ಸಂಬಂಧ ಆಯಾ ನೇಮಕಾತಿ ಪ್ರಾಧಿಕಾರಿಗಳೇ ಸರ್ಕಾರದ ನಿರ್ದೇಶನ ಪಡೆದು ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

K Jyothi 17/10/2024

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ.